ಶ್ರೀ ಮಿರಾಜುದ್ದೀನ್ ಎನ್. ಪಟೇಲ್:— ಮಾನ್ಯ ಅಧ್ಯಕ್ಷರೇ, ಮೊದಲು ಕಳುಹಿಸಲಾಗಿದ್ದ ಪ್ರಸ್ತಾವನೆಯನ್ನು ಸರ್ಕಾರ ದಿನಾಂಕ 6.2.95ಕ್ಕೆ ತಿರಸ್ಕರಿಸಿದೆ. ನಂತರ ದಿನಾಂಕ 5.12.98 ರಂದು ಮತ್ತೊಂದು ಪ್ರಸ್ತಾವನೆಯನ್ನು ಕಳುಹಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಎ. ನಾರಾಯಣ ಸ್ವಾಮಿ:— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇಂತಹ ಅಸಮರ್ಪಕವಾದಂತಹ ಉತ್ತರ ಕೊಟ್ಟರೆ ಏನು ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ದಿವಂಗತ ರಾಮಕೃಷ್ಣರವರು 96 ಮತ್ತು 97ರಲ್ಲಿ ಮಾನ್ಯ ಮಂತ್ರಿಗಳನ್ನು ಖುದ್ದಾಗಿ ಭೇಟಿ ಮಾಡಿ ಅರ್ಜಿ ಕೊಟ್ಟಾಗ ಮಾನ್ಯ ಮಂತ್ರಿಗಳು ನಿವೇಶನ ಮಂಜೂರು ಮಾಡುವುದಾಗಿ ಅವರಿಗೆ ತಿಳಿಸಿದರು. ಆದರೆ ಇದುವರೆಗೂ ಅದು ಆಗಿಲ್ಲ. ಬಹುಶಃ ಈ ಪ್ರಸ್ತಾವನೆ ಜಿಲ್ಲಾಧಿಕಾರಿಗಳ ಬಳಿ ಪೆಂಡಿಂಗ್ ಇಲ್ಲ. ಅದು ನಗರಾಭಿವೃದ್ಧಿ ಇಲಾಖೆಯಲ್ಲಿ ಪೆಂಡಿಂಗ್ ಇದೆ.

ಅಧ್ಯಕ್ಷರು:—1995ರಲ್ಲಿ ಕಳುಹಿಸಿದಂತಹ ಪ್ರಸ್ತಾವನೆಯನ್ನು ಸರ್ಕಾರ ರಿಜೆಕ್ಟ್ ಮಾಡಿದೆ. ಮತ್ತೊಮ್ಮೆ 1998ರಲ್ಲಿ ಪ್ರಸ್ತಾವನೆ ಕಳುಹಿಸಿ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ. ಹಿಂದೆ ಪ್ರಸ್ತಾವನೆ ರಿಜೆಕ್ಟ್ ಮಾಡಲಿಕ್ಕೆ ಏನು ಕಾರಣಗಳಿವೆಯೋ ನನಗೆ ಗೊತ್ತಿಲ್ಲ. ಸರ್ಕಾರ ಸದುದ್ದೇಶದಿಂದಲೇ ಮತ್ತೊಮ್ಮೆ ಪ್ರಸ್ತಾವನೆ ಕಳುಹಿಸಿಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ. ಸರ್ಕಾರ ನಿವೇಶನ ಮಂಜೂರು ಮಾಡಿಕೊಡುತ್ತದೆ ಬಿಡಿ.

ಶ್ರೀ ಎ. ನಾರಾಯಣ ಸ್ವಾಮಿ:— ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ದಲಿತರಿಗೆ 30 x 40 ಅಳತೆಯ ಸೈಟ್ ಅನ್ನು ಮಂಜೂರು ಮಾಡಿಕೊಡಲಿಕ್ಕೆ ಹತ್ತು ವರ್ಷಗಳು ಬೇಕು. ಬೇರೆ ಸಂಸ್ಥೆಗಳಿಗಾದರೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು 24 ಗಂಟೆಗಳಲ್ಲೇ ಮಂಜೂರು ಮಾಡಿಕೊಡುತ್ತದೆ. ಇದರಿಂದಾಗಿ ನಾನು ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಸದರಿ ಯುವಕ ಸಂಘಕ್ಕೆ ನಿವೇಶನ ಮಂಜೂರು ಮಾಡಿಕೊಡುವುದರಲ್ಲಿ ಯಾವುದೇ ತಪ್ಪು ಇಲ್ಲ. ಸದರಿ ನಿವೇಶನವನ್ನು ಮಂಜೂರು ಮಾಡಿಕೊಡಲೇಬೇಕೆಂದು ಒತ್ತಾಯಿಸಿ ನಾನು ಧರಣಿ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಎ. ನಾರಾಯಣ ಸ್ವಾಮಿಯವರು ಸದನದ ಬಾವಿಯಲ್ಲಿ ಧರಣಿ ಹೂಡಿದರು.

ಶ್ರೀ ಕೆ.ಎಸ್. ಈಶ್ವರಪ್ಪ:— ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಮಾನ್ಯ ಸದಸ್ಯರ ಕಳಕಳಿ ಅರ್ಥಮಾಡಿಕೊಳ್ಳಬೇಕು. ಅವರು ಶಾಸಕರಾಗಿ ಆಗಲೇ ಒಂದು ವರ್ಷವಾಯಿತು. ಹಿಂದೆ ದಿವಂಗತ ವೈ. ರಾಮಕೃಷ್ಣರವರು ಇರುವ ಸಂದರ್ಭದಲ್ಲೇ ಅವರು ಖುದ್ದಾಗಿ ಎರಡೆರಡು ಬಾರಿ ಮಂತ್ರಿಗಳ ಭೇಟಿ ಮಾಡಿದ್ದಾರೆ. ನಾವೇನೂ